ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಬುಧವಾರ, ದಿನಾಂಕ : 23 ನೇ ಸೆಪ್ಟೆಂಬರ್, 2020

ತಾಲ್ಲೂಕು ಕಛೇರಿಯಲ್ಲಿ ಬಾಕಿ ಉಳಿದಿರುವ ದುರಸ್ತಿ ಪ್ರಕರಣದ ಬಗ್ಗೆ

ಶ್ರೀ ಗೋವಿಂದ ರಾಜು (ವಿಧಾನ ಸಭೆಯಿಂದ ಚುನಾಯಿತರಾದವರು) :-

401 (320) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-
(ಅ) ಕೋಲಾರ ಜಿಲ್ಲೆಯ ಎಲ್ಲಾ ತಾಲ್ಲೂಕು ಕಛೇರಿಗಳಲ್ಲಿ ದುರಸ್ತಿ ಮಾಡಲು ಬಾಕಿ ಉಳಿದಿರುವ ಪ್ರಕರಣಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ದುರಸ್ಥಿ ಮಾಡಲು ಬಂದ ಅರ್ಜಿಗಳನ್ನು ಮೂಲ ದಾಖಲೆಗಳಿಲ್ಲವೆಂದು ಹಿಂಬರಹ ನೀಡುತ್ತಿರುವುದು ನಿಜವೇ;

(ಇ) ಹಾಗಿದ್ದಲ್ಲಿ, ತಾಲ್ಲೂಕು ರೆಕಾರ್ಡ್ ರೂಂಗಳಲ್ಲಿ ಮೂಲ ದಾಖಲೆಗಳು ಲಭ್ಯವಿರುವುದಿಲ್ಲವೇ ; ಹಾಗಿದ್ದಲ್ಲಿ, ಮೂಲ ದಾಖಲೆಗಳು ಇಲ್ಲದೆ ಇರಲು ಕಾರಣಗಳೇನು ;

(ಈ) ತಾಲ್ಲೂಕು ರೆಕಾರ್ಡ್ ರೂಂಗಳಲ್ಲಿ ಮೂಲ ದಾಖಲೆಗಳು ಲಭ್ಯವಿಲ್ಲದಿದ್ದಾಗ ದುರಸ್ತಿ ಪ್ರಕರಣಗಳನ್ನು ಇತ್ಯರ್ಥಪಡಿಸಲು (ವಿಲೆ) ಸರ್ಕಾರ ಅನುಸರಿಸುತ್ತಿರುವ ಮಾನದಂಡಗಳೇನು ;

(ಉ) ದಾಖಲೆಗಳ ಕೊಠಡಿಯಲ್ಲಿ ಬಹುತೇಕ ಮೂಲ ದಾಖಲೆಗಳು ನಾಪತ್ತೆಯಾಗಲು ಕಾರಣಗಳೇನು ;

(ಊ) ಈ ಮೂಲ ದಾಖಲೆಗಳು ನಾಪತ್ತೆಯಾಗಲು ಕಾರಣಕರ್ತರಾದ ಅಧಿಕಾರಿ/ಸಿಬ್ಬಂದಿಗಳ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?